**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ಕುಮಟಾ</u>**

**ಸಿ.ಸಿ. ನಂ. 1312/2020**

ಸಿ.ಡಬ್ಲ್ಯು. 1

ಪಿ.ಡಬ್ಲ್ಯು. 5

ಸಾಕ್ಷಿದಾರರ ಹೆಸರು – ಕೃಪಾಕರ ದೇಶಭಂಡಾರಿ

ತಂದೆಯ ಹೆಸರು – ದಾಮೋದರ ದೇಶಭಂಡಾರಿ

ವಯಸ್ಸು – 45 ವರ್ಷ

ಉದ್ಯೋಗ – ಕೂಲಿಕೆಲಸ

ವಾಸ್ತವ್ಯ – ಕೆಕ್ಕಾರ

(ಇಂದು ದಿನಾಂಕಃ 22-11-2022 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

1 ರಿಂದ 3 ನೇ ಆರೋಪಿತರನ್ನು ನಾನು ನೋಡಿರುವುದಿಲ್ಲ ಹಾಗೂ ನೋಡಿದರೆ ಗುರುತಿಸಲು ಆಗುವುದಿಲ್ಲ. ನನಗೆ ಸೇರಿದ ಕೆಎ-47-2604 ನೋಂದಣಿ ಸಂಖ್ಯೆಯ ಹಿರೋ ಹೊಂಡ ಸ್ಪ್ಲೆಂಡರ್ ದ್ವಿಚಕ್ರ ವಾಹನ ಇರುತ್ತದೆ. ಸುಮಾರು 4 ವರ್ಷಗಳ ಹಿಂದೆ ನನ್ನ ವಾಹನವನ್ನು ರಾತ್ರಿ 10.00 ರಿಂದ 10.30 ಗಂಟೆಯ ಸಮಯದಲ್ಲಿ ಮಣಕಿ ಮೈದಾನದಲ್ಲಿ ನಿಲ್ಲಿಸಿ ಅಲ್ಲೇ ಒಂದು ಕಾರ್ಯಕ್ರಮವನ್ನು ನೋಡಲು ಹೋಗಿದ್ದೆನು. ತಡರಾತ್ರಿ ಸುಮಾರು 12.00 ರಿಂದ 12.30 ಗಂಟೆ ಸುಮಾರಿಗೆ ಬಂದು ನೋಡಲಾಗಿ ನನ್ನ ವಾಹನ ಅಲ್ಲಿ ಇರಲಿಲ್ಲ. ನಾನು ಸುತ್ತ ಮುತ್ತ ಹುಡುಕಿದರು ಸಹ ನನ್ನ ವಾಹನ ಕಂಡುಬರಲಿಲ್ಲ. ನಂತರ ನಾನು ಪೊಲೀಸನವರಿಗೆ ಫಿರ್ಯಾದನ್ನು ನೀಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಫಿರ್ಯಾದನ್ನು ನಿ.ಪಿ. 6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 6(ಎ) ಎಂದು ಗುರುತಿಸಲಾಯಿತು.

ನಂತರ ಪೊಲೀಸನವರು ಮರುದಿನ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಪಂಚನಾಮೆಯನ್ನು ಜರುಗಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಫೊಟೋವನ್ನು ತೆಗೆದಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಫೋಟೋವನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದೆ. ನನ್ನ ಗಾಡಿಯು ಕಳ್ಳತನವಾದ 2 ವರ್ಷಗಳ ನಂತರ ದೊರೆತಿರುವುದಾಗಿ ಪೊಲೀಸನವರು ನನಗೆ ತಿಳಿಸಿದ್ದು, ನನ್ನ ದ್ವಿಚಕ್ರ ವಾಹನವನ್ನು ಹೆಗಡೆಯ ಕಾಲೇಜ್ ಬಳಿ ನಿಲ್ಲಿಸಲಾಗಿತ್ತು. ನಾನು ಸ್ಥಳಕ್ಕೆ ಹೋಗಿ ನನ್ನ ವಾಹನವನ್ನು ನೋಡಿರುತ್ತೇನೆ. ವಾಹನ ಇದ್ದ ಸ್ಥಳದಲ್ಲಿ ಪೊಲೀಸನವರು ಫೊಟೋಗಳನ್ನು ತೆಗೆದಿರುತ್ತಾರೆ. ನನ್ನ ದ್ವಿಚಕ್ರ ವಾಹನವನ್ನು ಕಳ್ಳತನ ಮಾಡಿದಂತಹ ವ್ಯಕ್ತಿಗಳು ಯಾರು ಎಂದು ಪೊಲೀಸನವರು ಹೇಳಿರುವುದಿಲ್ಲ ಹಾಗೂ ನನಗೆ ಅವರನ್ನು ತೋರಿಸಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿತರ ಗುರುತಿಸುವಿಕೆಗೆ ಸಂಬಂಧಪಟ್ಟಂತೆ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು –ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿಃ 28-06-2019 ರಂದು ನನ್ನ ದ್ವಿಚಕ್ರ ವಾಹನವನ್ನು ಕದ್ದಂತಹ ವ್ಯಕ್ತಿಗಳ ಹೆಸರನ್ನು ನನಗೆ ತಿಳಿಸಿ, ಅವರುಗಳ ಪೈಕಿ 3 ನೇ ಆರೋಪಿಯನ್ನು ನನಗೆ ತೋರಿಸಿ ಮರುಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ದಿಃ 02-07-2019 ರಂದು ಇತರ ಇಬ್ಬರು ಆರೋಪಿತರಾದ 1 ಮತ್ತು 2 ನೇ ಆರೋಪಿತರನ್ನು ಪೊಲೀಸನವರು ಹಿಡಿದಿದ್ದು ಆ ಸಂದರ್ಭದಲ್ಲಿಯೂ ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ನನಗೆ ಸೇರಿದ ದ್ವಿಚಕ್ರ ವಾಹನವನ್ನು ಕಳುವು ಮಾಡಿದ ವಿಚಾರವನ್ನು ತಿಳಿಸಿರುವುದಾಗಿ ಹಾಗೂ 1 ರಿಂದ 3 ನೇ ಆರೋಪಿತರು ನನ್ನ ದ್ವಿಚಕ್ರ ವಾಹವನ್ನು

ಕಳುವು ಮಾಡಿರುವುದಾಗಿ ಪೊಲೀಸನವರು ನನಗೆ ತಿಳಿಸಿ, 3 ಜನ ಆರೋಪಿತರನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರನ್ನು ನನಗೆ ತೋರಿಸಿದ್ದರು ಸಹ ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಆರೋಪಿತರನ್ನು ಗುರುತಿಸಲು ವಿಫಲನಾಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿತರ ಪರ ಶ್ರೀ ಪಿ.ಎಸ್.ಎನ್. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ